ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ
ರಾಷ್ಟ್ರೀಯ ಸೇವಾ ಯೋಜನೆ

ಸಂಖ್ಯೆ: ಡಿಟಿಇ/ಎನ್‌ಎಸ್‌ಎಸ್/04/ಐಡಿಪಿ/2017-18/30

ಸಂಯೋಜನಾಧಿಕಾರಿಯವರ ಕಛೇರಿ,
ಅರಮನೆ ರಸ್ತೆ ಬೆಂಗಳೂರು-01,
ದಿನಾಂಕ:04-09-2017

## ಸುತ್ತೋಲೆ

ಭಾರತದ ಮಾಜಿ ರಾಷ್ಟ್ರಪತಿ ದಿ// **ಡಾ. ಸರ್ವಪಳ್ಳಿ ರಾಧಕೃಷ್ಣನ್** ರವರ ಹುಟ್ಟು ಹಬ್ಬದ ಅಂಗವಾಗಿ ಆಚರಿಸುವ ಶಿಕ್ಷಕರ ದಿನಾಚರಣೆಗೆ ಕರ್ನಾಟಕದ ಘನತೆವೆತ್ತ ರಾಜ್ಯಪಾಲರು, ಸನ್ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ಮಾನ್ಯ ಉನ್ನತ ಶಿಕ್ಷಣ ಸಚಿವರು, ಸಂದೇಶಗಳನ್ನು ನೀಡಿರುತ್ತಾರೆ. ಸದರಿ ಸಂದೇಶಗಳನ್ನು ತಮ್ಮ ಕಾಲೇಜಿನ ಸೂಚನ ಫಲಕದಲ್ಲಿ ಪ್ರಕಟಿಸಲು ತಿಳಿಸಲಾಗಿದೆ.

ಸಂದೇಶ ಪತ್ರಗಳನ್ನು ಲಗತ್ತಿಸಲಾಗಿದೆ.

ನಿರ್ದೇಶಕರು

ಪ್ರತಿ: 1 ರಾಜ್ಯದ ಎಲ್ಲಾ ಸರ್ಕಾರಿ /ಅನುದಾನಿತ/ಖಾಸಗಿ, ಇಂಜಿನೀಯರಿಂಗ್ ಕಾಲೇಜು ಪಾಲಿಟೆಕ್ನಿಕ್‌ಗಳ ಪ್ರಾಚಾರ್ಯರುಗಳಿಗೆ -ಸೂಕ್ತ ಕ್ರಮಕ್ಕಾಗಿ
2. ಇ-ಆಡಳಿತ ಅಂತರ್‌ಜಾಲತಾಣದಲ್ಲಿ ಪ್ರಕಟಿಸಲು
3. ಕಛೇರಿ ಕಡತಕ್ಕೆ



ರಾಜಭವನ
ಬೆಂಗಳೂರು

ವಜುಭಾಯಿ ವಾಲಾ
ರಾಜ್ಯಪಾಲರು
ಕರ್ನಾಟಕ

# ಸಂದೇಶ

ಮಾಜಿ ರಾಷ್ಟ್ರಪತಿಗಳು ಹಾಗೂ ಶಿಕ್ಷಣ ತಜ್ಞರಾದ ದಿವಂಗತ ಡಾ॥ ಸರ್ವಪಲ್ಲಿ ರಾಧಾಕೃಷ್ಣನ್‌ರವರು ಸುಶಿಕ್ಷಿತವಾದ ರಾಷ್ಟ್ರ ನಿರ್ಮಾಣಕ್ಕೆ ಸಲ್ಲಿಸಿರುವ ಸೇವೆಯನ್ನು ಸ್ಮರಿಸುವ ಸಲುವಾಗಿ, ಅವರ ಜನ್ಮ ದಿನೋತ್ಸವವನ್ನು "ಶಿಕ್ಷಕರ ದಿನಾಚರಣೆ"ಯನ್ನಾಗಿ ಆಚರಿಸಲಾಗುತ್ತಿದೆ. ಪ್ರತಿವರ್ಷದಂತೆ 'ಸಾರ್ವಜನಿಕ ಶಿಕ್ಷಣ ಇಲಾಖೆ'ಯು ದಿನಾಂಕ: 05-09-2017ರಂದು "ಶಿಕ್ಷಕರ ದಿನಾಚರಣೆ"ಯನ್ನು ಆಚರಿಸುತ್ತಿರುವುದು ಸಂತೋಷದ ವಿಷಯವಾಗಿದೆ.

ಈ ಶುಭ ಸಮಾರಂಭಕ್ಕೆ ಶ್ರಮಪಟ್ಟಂತಹ ಎಲ್ಲಾ ಆಡಳಿತ ವರ್ಗದವರಿಗೂ, ಭಾಗವಹಿಸಿದವರಿಗೂ ಶುಭಾಶಯಗಳನ್ನು ಹಾರೈಸುತ್ತೇನೆ.

ದಿನಾಂಕ : 05-09-2017

(ವಜುಭಾಯಿ ವಾಲಾ)



ವಿಧಾನಸೌಧ
ಬೆಂಗಳೂರು

# ಸಂದೇಶ

**ಸಿದ್ದರಾಮಯ್ಯ**
ಮುಖ್ಯ ಮಂತ್ರಿಗಳು
ಕರ್ನಾಟಕ ಸರ್ಕಾರ

ಅತ್ಯುತ್ತಮ ಶಿಕ್ಷಕ, ಮಹಾನ್ ತತ್ವಜ್ಞಾನಿ ಹಾಗೂ ಭಾರತದ ಮಾಜಿ ರಾಷ್ಟ್ರಪತಿ ಡಾ॥ ಸರ್ವಪಲ್ಲಿ ರಾಧಾಕೃಷ್ಣನ್ ಅವರ ಜನ್ಮ ದಿನಾಚರಣೆಯ ಸವಿ ನೆನಪಿನಲ್ಲಿ ಆಚರಿಸುವ ಶಿಕ್ಷಕರ ದಿನಾಚರಣೆಯ ಸುಸಂದರ್ಭದಲ್ಲಿ ರಾಜ್ಯದ ಎಲ್ಲಾ ಶಿಕ್ಷಕರನ್ನು ಮೊದಲು ವಂದಿಸುತ್ತೇನೆ ಹಾಗೂ ನಂತರ ಅಭಿನಂದಿಸುತ್ತೇನೆ.

ನಾನು ಅತ್ಯಂತ ಅಭಿಮಾನಿಸುವ ಹಾಗೂ ಅತೀ ಹೆಚ್ಚು ಗೌರವಿಸುವ ಸಮುದಾಯ ಎಂದರೆ ಶಿಕ್ಷಕರ ಸಮುದಾಯ. ಮುಗ್ಧ ಮಕ್ಕಳಿಗೆ ಎಲ್ಲಿಲ್ಲದ ಅಕ್ಕರೆ ತೋರಿ, ಪ್ರೀತಿಯಿಂದ ಬೋಧನೆ ಮಾಡಿ, ಸ್ಫಟಿಕದಂತೆ ಸ್ಫುಟವಾದ ಮಕ್ಕಳ ಮೃದು ಮನಸ್ಸಿನಲ್ಲಿ ಹೊಸ ಹೊಸ ವಿಚಾರಗಳನ್ನು ನೂತನ ಹಾಗೂ ವಿನೂತನ ವಿಷಯಗಳನ್ನು ತುಂಬಿ ಚಿಂತನ ಹಾಗೂ ಮಂಥನಕ್ಕೆ ಅತ್ಯುತ್ತಮ ವೇದಿಕೆ ಕಲ್ಪಿಸುವ ಶಿಕ್ಷಕರ ವೃತ್ತಿ ಪವಿತ್ರವಾದುದು ಹಾಗೂ ಪೂಜ್ಯವಾದುದು.

ಒಂದು ಮೂಲೆಯಲ್ಲಿ ಅನಾಥವಾಗಿ ಬಿದ್ದಿರುವ ಸಾಧಾರಣ ಕಲ್ಲುಗಳಿಗೆ ಜೀವ ನೀಡಿ ಚಿತ್ತಾಕರ್ಷಕ ಶಿಲ್ಪ ಕಲಾಕೃತಿಗಳನ್ನಾಗಿಸುವ ಅಸಾಧಾರಣ ಕಲೆ ಪ್ರತಿಭಾವಂತ ಕಲಾವಿದರಿಗೆ ಸಿದ್ಧಿಸಿದ್ದರೆ, ಏನೂ ಅರಿಯದ ಮಕ್ಕಳಲ್ಲಿ ನವ ಚೈತನ್ಯ ಮೂಡಿಸಿ, ನವ ನವೀನ ವ್ಯಕ್ತಿತ್ವ ರೂಪಿಸಿ ಮೇರು ವ್ಯಕ್ತಿಗಳನ್ನಾಗಿಸುವ ವಿಶಿಷ್ಠ ಶಕ್ತಿ ಮತ್ತು ವಿಶೇಷ ಸಾಮರ್ಥ್ಯ ಪ್ರತಿಭಾಶಾಲಿ ಶಿಕ್ಷಕರಿಗೆ ಮಾತ್ರ ಒಲಿಯುತ್ತದೆ.

ಎಷ್ಟೇ ಗಳಿಕೆ ಇದ್ದರೂ ಕೂಡಾ ಬಹುತೇಕ ಜನರಿಗೆ ತಮ್ಮ ವೃತ್ತಿಯಲ್ಲಿ ತೃಪ್ತಿ ಇರುವುದಿಲ್ಲ. ಆದರೆ, ಆಕರ್ಷಕ ವೇತನವಿಲ್ಲದಿದ್ದರೂ ಶಿಕ್ಷಕ ವೃತ್ತಿಯಲ್ಲಿ ಸೇವೆ ಸಲ್ಲಿಸುವವರಿಗೆ ತೃಪ್ತಿ ಮಾತ್ರವಲ್ಲ, ಸಂತೃಪ್ತಿ ಇರುತ್ತದೆ. ಶಿಕ್ಷಕರು ಶಾಲೆಗಳನ್ನು ತೊರೆಯಬಹುದು, ಮಹಾವಿದ್ಯಾಲಯಗಳನ್ನು ತೊರೆಯಬಹುದು. ವಿಶ್ವವಿದ್ಯಾಲಯಗಳನ್ನು ತೊರೆಯಬಹುದು. ಆದರೆ, ಶಿಕ್ಷಕ ವೃತ್ತಿಯನ್ನು ಮಾತ್ರ ತೊರೆಯುವುದಿಲ್ಲ. ಒಮ್ಮೆ ಶಿಕ್ಷಕರಾದರೆ, ಸದಾ ಶಿಕ್ಷಕರಾಗಿಯೇ ಮುಂದುವರೆಯುತ್ತಾರೆ ಎಂಬುದು ಇದಕ್ಕೆ ಉತ್ತಮ ಉದಾಹರಣೆ.

ನಾವು ಪ್ರೀತಿಸುವ ಶಿಕ್ಷಕರು ಸದಾ ನಮ್ಮ ಕಣ್ಣ ಮುಂದೆಯೇ ಇರುತ್ತಾರೆ. ನಮ್ಮ ಸ್ಮರಣಪಟಲದಲ್ಲೇ ವಿಹರಿಸುತ್ತಿರುತ್ತಾರೆ. ಇದು ನನ್ನ ಸ್ವಂತ ಅನುಭವ. ಅಂತೆಯೇ, ತಮ್ಮ ಅನುಭವವೂ ಕೂಡಾ ಎಂದು ಭಾವಿಸುತ್ತೇನೆ. ರಾಜ್ಯದ ಎಲ್ಲಾ ಶಿಕ್ಷಕರಿಗೂ ಮತ್ತೊಮ್ಮೆ ಶಿಕ್ಷಕರ ದಿನಾಚರಣೆಯ ಶುಭಾಶಯಗಳು.

(ಸಿದ್ದರಾಮಯ್ಯ)

ದಿನಾಂಕ : 05-09-2017



ವಿಧಾನಸೌಧ
ಬೆಂಗಳೂರು

**ಬಸವರಾಜ ರಾಯರೆಡ್ಡಿ**
ಉನ್ನತ ಶಿಕ್ಷಣ ಸಚಿವರು
ಕರ್ನಾಟಕ ಸರ್ಕಾರ

# ಸಂದೇಶ

ಭಾರತರತ್ನ ಡಾ॥ ಸರ್ವಪಲ್ಲಿ ರಾಧಾಕೃಷ್ಣನ್ ಸ್ವತಂತ್ರ ಭಾರತದ ಎರಡನೆಯ ರಾಷ್ಟ್ರಪತಿಗಳು ಹಾಗೂ ಮೊಟ್ಟಮೊದಲ ಉಪರಾಷ್ಟ್ರಪತಿಗಳು ಆಗಿದ್ದರು. ಇವರು ವಿಶ್ವಪ್ರಸಿದ್ಧ ತತ್ವಜ್ಞಾನಿಗಳು ಹಾಗೂ ಶಿಕ್ಷಕರು. ತಮ್ಮ ಶಿಕ್ಷಕ ಹುದ್ದೆಯನ್ನು ಅಪಾರವಾಗಿ ಗೌರವಿಸುತ್ತಿದ್ದ ರಾಧಾಕೃಷ್ಣನ್ ಅವರ ಹುಟ್ಟಿದ ದಿನವನ್ನು ಶಿಕ್ಷಕರ ದಿನಾಚರಣೆಯಾಗಿ ಆಚರಿಸಲಾಗುತ್ತಿದೆ.

'ಶಿಕ್ಷಣವೆಂದರೆ ಕೇವಲ ಮಾಹಿತಿಗಳನ್ನು ವಿವರಿಸುವುದಲ್ಲ, ಕುತೂಹಲವನ್ನು ಜಾಗೃತಗೊಳಿಸುವುದು' ಎನ್ನುತ್ತಾರೆ ಖ್ಯಾತ ವಿಜ್ಞಾನಿ ಮತ್ತು ಮಾನವತಾವಾದಿ ಆಲ್ಬರ್ಟ್ ಐನ್‌ಸ್ಟೀನ್. ಶಿಕ್ಷಣವು ವಿದ್ಯಾರ್ಥಿಯ ಸರ್ವಾಂಗೀಣ ಬೆಳವಣಿಗೆಗೆ ಅಲ್ಲದೆ ಪರಿಪೂರ್ಣ ಮಾನವನಾಗಲು ಸಹಾಯಕವಾಗಬೇಕು. ಅಂಥ ಶಿಕ್ಷಣ ನೀಡುವುದು ನಮ್ಮ ಗುರಿಯಾಗಬೇಕು. ಜ್ಞಾನ ಪಡೆಯಲು ಇರುವ ಮಾರ್ಗಗಳನ್ನು, ಸಾಹಿತ್ಯವನ್ನು ಓದುವ ಸಂಸ್ಕೃತಿಯನ್ನು ವಿದ್ಯಾರ್ಥಿಗಳಲ್ಲಿ ಮೈಗೂಡಿಸುವ ಕೆಲಸ ಮಾಡಬೇಕು. ಇದಕ್ಕಾಗಿ ಶಿಕ್ಷಕರು ಪಾಂಡಿತ್ಯ, ಶಿಸ್ತು, ಉತ್ತಮ ನಡವಳಿಕೆ, ನಿಷ್ಠೆ, ಕರ್ತವ್ಯದಲ್ಲಿ ಬದ್ಧತೆಯಿಂದ ಕೆಲಸ ಮಾಡುವುದು ಅನಿವಾರ್ಯ.

ಶಿಕ್ಷಕರು ಒಂದು ಸಮಾಜದ ನಿರ್ಮಾತೃಗಳು. ಇವರ ಒಡನಾಟ ಸದಾ ತಮ್ಮನ್ನು ವೀಕ್ಷಿಸುತ್ತಾ ತೆರೆದ ಕಣ್ಣುಗಳಿಂದ ನಿರೀಕ್ಷಿಸುವ ವಿದ್ಯಾರ್ಥಿಗಳೊಂದಿಗಿರುತ್ತದೆ. ಆದ್ದರಿಂದಲೇ ಶಿಕ್ಷಕರ ಕೆಲಸ ವಿಶಿಷ್ಟವಾದದ್ದು. ಒಂದು ರಾಷ್ಟ್ರಕ್ಕೆ ಪ್ರಾಕೃತಿಕ ಸಂಪನ್ಮೂಲದಷ್ಟೇ ಮಾನವ ಸಂಪನ್ಮೂಲವು ಮುಖ್ಯ. ಇಂತಹ ಮಾನವ ಸಂಪನ್ಮೂಲವನ್ನು ನಿರ್ಮಾಣ ಮಾಡುತ್ತಿರುವ ಎಲ್ಲ ಶಿಕ್ಷಕರಿಗೆ ಶಿಕ್ಷಕರ ದಿನಾಚರಣೆಯ ಹಾರ್ದಿಕ ಶುಭಾಶಯಗಳು.

(ಬಸವರಾಜ ರಾಯರೆಡ್ಡಿ)

ದಿನಾಂಕ : 05-09-2017